

ಬೇಕಾದ ಫ್ರಿಜ್ಜು, ವಾಷಿಂಗ್ ಮೆಷೀನ್ ಎಲ್ಲ ತರಿಸಿ ಹಾಕಿಸಿದ. ಅಕ್ಕಂದಿರ ಮದುವೆ ಮಾಡಿದ. ಮೊದಲನೆಯವಳ ಮದುವೆ ಸಲೀಸಾಗಿ ಆಯಿತು. ಎರಡನೆಯವಳ ಮದುವೆ ಮಾತ್ರ ಸ್ವಲ್ಪ ಕಷ್ಟ ಆಯಿತು. 'ಹುಡುಗಿ ಕಪ್ಪು ಅಲ್ವಾ? ನಕ್ಷತ್ರ ಸಾ ಸರಿ ಇಲ್ಲಂತೆ ಅಲ್ವಾ?' ಅಂತೆಲ್ಲ ರಾಗ ಎಳೀತಾ ಇದ್ದವರೇ ಜಾಸ್ತಿ ಆಗಿತ್ತು. ಅಂತೂ ಇಂತೂ ಅವಳಿಗೆ ಮೂವತ್ತು ದಾಟಿದ ಮೇಲೆ ಮದುವೆ ಆಯಿತು, ಅಷ್ಟಾಗುವಾಗ ರಾಜೇಶನಿಗೆ ಸಾ ಮದುವೆಯ ಪ್ರಾಯ ಮೀರ್ತಾ ಬಂದಿತ್ತು. ಹೆಚ್ಚಿನ ಹೆಣ್ಣಿನ ಕಡೆಯವರು ಇವನ ಮನೆಯ ಪರಿಸ್ಥಿತಿ ನೋಡಿ ಹೆಣ್ಣು ಕೊಡ್ಲಿಕ್ಕೆ ಹಿಂದೆ ಮುಂದೆ ನೋಡ್ತಿದ್ರು. ಹೀಗೆ ನೋಡ್ತಾ ನೋಡ್ತಾ ಅವನಿಗೆ ಸಾ ಪ್ರಾಯ ಮೂವತ್ತೆರಡು ಕಳೀತು. 'ಮಗಾ... ಇನ್ನು ಎಷ್ಟು ದಿನ ಅಂತ ನೀನು ಹೀಗೇ ಇರೂದು? ನಾನು ಸಾಯುವ ಮೊದಲು ನಿನ್ನ ಮದುವೆ ನೋಡ್ಬೇಕು ಅಂತ ಎಣಿಸಿದ್ದೆ. ಅದು ಆಗ್ತದಾ ಇಲ್ವಾ' ಅಂತ ಅವನ ತಾಯಿ ಬೇಜಾರಿನಿಂದ ಹೇಳಿದ್ದಿದ್ದರು. 'ಅಮ್ಮಾ... ಇದಕ್ಕೆಲ್ಲ ಮಂಡೆ ಬಿಸಿ ಯಂತಕ್ಕೆ ಮಾಡಿಕೊಳ್ತೀ? ಟೈಂ ಬಂದಾಗ ಬ್ರಮ್ಮ ಗಂಟು ಹಾಕಿದ ಜೋಡಿ ಸಿಕ್ಕಿಯೇ ಸಿಕ್ತದೆ. ನೀನು ಮಂಡೆ ಬಿಸಿ ಮಾಡಿಕೊಳ್ಳುದೇ ಬೇಡ' ಅಂತ ಅವ ಧೈರ್ಯ ಹೇಳ್ತಿದ್ದ.

ರಾಜೇಶ ಒಂದೆರಡು ವರ್ಷಗಳ ನಂತರ ಇನ್ನೊಂದು ಕಂಪನಿ ಸೇರಿದ. ಹಿಂದಿನ ಸಂಬಳಕ್ಕಿಂತ ಎರಡು ಪಟ್ಟು ಜಾಸ್ತಿ. ಒಳ್ಳೆಯ ಸೌಕರ್ಯ. ಆದರೆ ಓಡಾಟ ತುಂಬ ಇರ್ತಿತ್ತು. ದೇಶ ಮಾತ್ರ ಅಲ್ಲ, ಫಾರಿನ್ನಿಗೆ ಸಾ ಹೋಗ್ಬೇಕಾಗಿ ಬರ್ತಿತ್ತು. 'ನಿಂಗೆ ಬರೀ ಕಂಪೆನಿದ್ದೇ ಚಿಂತೆ. ಪ್ರಾಯ ಮೂವತ್ತೈದು ದಾಟುತ್ತಾ ಬಂತು. ಮದುವೆ ಆಗದೇ ಎಷ್ಟು ದಿನ ಇರ್ತೀ? ನಾನು ಎಣಿಸುದೇ ಒಂದು. ಆಗುದೇ ಒಂದು. ನಮ್ಮನ್ನೆಲ್ಲ ನೀನು ಚೆಂದಾಗಿ ಇಟ್ಟೆ. ನಿನ್ನ ಬದುಕು ಚೆಂದ ಆಗುದು ಯಾವಾಗ?' ಅಂತ ಅವನ ಅಮ್ಮ ಫೋನು ಮಾಡಿ ಪಿರಿಪಿರಿ ಮಾಡ್ತಲೇ ಇದ್ರು. 'ಅಮ್ಮಾ... ನೀನು ಮಂಡೆ ಬಿಸಿ ಮಾಡಿಕೊಳ್ಬೇಡ. ನನ್ನ ಮೇಲಧಿಕಾರಿ ನಮ್ಮ ಊರಿನ ಶ್ರೀಪತಿ ರಾಯರು. ಇಡೀ ನಮ್ಮ ಪ್ರಾಜೆಕ್ಟಿಗೇ ಹೆಡ್ಡ್. ಅವರ ಕೈ ಕೆಳಗೆ ನಮ್ಮಂಥ ಐವತ್ತು ಅರುವತ್ತು ಮಂದಿ ಕೆಲಸ ಮಾಡ್ತಾ ಇದ್ದಾರೆ. ನಾನು ಕೆಲಸಕ್ಕೆ ಸೇರಿದ ದಿನದಂದೇ ಅವರು ನನ್ನ ಹತ್ರ ನೀನು ಎಷ್ಟು ಕಷ್ಟಪಟ್ಟು ಈ ಕಂಪನಿಯಲ್ಲಿ ದುಡೀತೀಯಾ, ಅಷ್ಟು ಮೇಲೆ ಬರ್ತೀಯಾ. ಇಷ್ಟು ಸಣ್ಣ ಪ್ರಾಯದಲ್ಲೇ ಈ ಕಂಪನಿಗೆ ಸೇರಿದ್ದೀ. ನೀನು ಮನಸ್ಸು ಮಾಡಿದ್ರೆ ಎಷ್ಟೂ ಮೇಲಕ್ಕೆ ಹೋಗ್ಬಹುದು. ಸಣ್ಣ ಪ್ರಾಯದಲ್ಲೇ ದೊಡ್ಡ ಹುದ್ದೆಗೆ ಹೋಗ್ತೀ. ಯಾರಿಗೆ ಗೊತ್ತು? ಒಂದು ದಿನ ನೀನೇ ನನ್ನ ಜಾಗದಲ್ಲಿ ಇರ್ಬಹುದು ಅಂತ ಹೇಳಿದ್ದರು. ಹಾಗಿರುವಾಗ ಒಂದೆರಡು ವರ್ಷ ಕಷ್ಟಪಡ್ತೇನೆ. ಆಮೇಲೆ ನೋಡುವಾ' ಅಂತ ಹೇಳಿದ್ದ.

ಬೆಂಗಳೂರಿನಂಥ ಮಹಾ ನಗರದಲ್ಲಿ ಎಲ್ಲ ಸೌಕರ್ಯಗಳಿದ್ದೂ ತಾನು ಒಂಟಿಯಾಗಿ ಇರುವಾಗ ರಾಜೇಶನಿಗೂ ತನಗೊಂದು ಸಂಗಾತಿ ಸಿಕ್ಕಿದ್ದರೆ ಎಂಬ ಭಾವನೆ ಬರ್ತಾ ಇತ್ತು. ಹೆಣ್ಣಿನ ಕಡೆಯವರೇ ಅವನನ್ನು ತಿರಸ್ಕರಿಸ್ತಾ ಇದ್ದದ್ದರಿಂದ ಅವ ತುಂಬ ಬೇಸರಗೊಂಡಿದ್ದ.

ಹೀಗಿರುವಾಗ ಒಂದು ದಿನ, ಶ್ರೀಪತಿರಾಯರು ರಾಜೇಶನನ್ನು ತನ್ನ ಛೇಂಬರಿಗೆ ಕರೆಸಿಕೊಂಡ್ರು. 'ರಾಜೇಶಾ... ನಿನ್ನ ಹತ್ರ ಒಂದು ಕೇಳ್ತೇನೆ. ಇಲ್ಲ ಅಂತ ಹೇಳ್ಬೇಡ' ಅಂತ ಕೇಳಿದರು.

'ಯೆಂತ ಹೇಳಿ ಸರ್?'

'ನೀನು ನಮ್ಮ ಕಂಪನಿಗೆ ಸೇರಿದ ದಿನದಿಂದ ನಿನ್ನನ್ನು ನೋಡ್ತಾ ಇದ್ದೇನೆ. ತುಂಬ ನೀಟಾಗಿ ಕೆಲಸ ಮಾಡ್ತಾ ಇದ್ದೀಯ. ನಿನ್ನ ಗತ್ತು, ಗಾಂಭೀರ್ಯ ಎಲ್ಲ ನೋಡಿದಾಗ ನನ್ನ ಮಗಳಿಗೆ ನೀನೇ ಸರಿಯಾದ ಗಂಡು ಅಂತ ನಂಗೆ ಅನ್ನಿಸ್ತಾ ಉಂಟು. ನಂಗೆ ಇರುವವಳು ಒಬ್ಬೇ ಮಗಳು. ಎಂಬಿಎ ಮಾಡಿದ್ದಾಳೆ. ನೀನೂ ನೋಡಿರ್ತೀ, ಸ್ಮಿತಾ ಅಂತ ನಮ್ಮ ಕಂಪನಿಯಲ್ಲಿಯೇ ಕೆಲಸ ಮಾಡ್ತಾ ಇದ್ದಾಳೆ. ಅವಳಿಗೆ ಸಾ ಮೂವತ್ತು ದಾಟಿತು. ತುಂಬ ಪ್ರಯತ್ನಪಟ್ಟೆ, ಮದುವೆ ಮಾಡ್ಬೇಕು ಅಂತ. ಯೆಂತ ಮಾಡಿದ್ರೂ ಆಗ್ಲೇ ಇಲ್ಲ. ನಾಲ್ಕೈದು ಪ್ರಪೋಸಲ್ ಹತ್ತಿರ ಬಂದು ಅಲ್ಲಿಗೇ ಮದುವೆ ಕ್ಯಾನ್ಸಲ್ ಆಯ್ತು. ನಂಗೆ ತುಂಬ ಮಂಡೆ ಬಿಸಿ ಆಗಿದೆ. ನಂಗೆ ಸಾ ಪ್ರಾಯ ಆಗ್ತಾ



ಬಂತು. ಹೆಂಡತಿ ತೀರಿಕೊಂಡ ಮೇಲೆ ಈಗ ಆರೇಳು ವರ್ಷಗಳಿಂದ ತುಂಬ ಬೇಜಾರಾಗಿದೆ. ನಂಗೆ ಎಲ್ಲವೂ ಮಗಳೇ. ನೀನು ಒಮ್ಮೆ ಅವಳ ಬಳಿ ಮಾತಾಡು. ನಿಂಗೆ ಇಷ್ಟ ಆಗಿಯೇ ಆಗ್ತಾಳೆ. ಹೇಗೆ? ಆದೀತೋ?' ಅಂತ ಕೇಳಿದರು.

ಇವನಿಗೆ ಯೆಂತ ಹೇಳ್ಬೇಕು ಅಂತ ಗೊತ್ತಾಗ್ಲಿಲ್ಲ. ಬಡತನದ ಹಿನ್ನೆಲೆಯಿಂದ ಬಂದ ತಾನೆಲ್ಲಿ? ಆಗರ್ಭ ಶ್ರೀಮಂತರಾದ ಶ್ರೀಪತಿರಾಯರೆಲ್ಲಿ?

'ಹೀಗೆ ನಿಂತ ಮೆಟ್ಟಿನಲ್ಲಿ ಕೇಳಿದ್ರೆ ಹೇಗೆ? ಊರಲ್ಲಿ ಅಮ್ಮನ ಹತ್ರ ಕೇಳ್ಬೇಕು. ನಿಮ್ಮ ಮಗಳ ಹತ್ರ ಪರ್ಸನಲ್ ಆಗಿ ಮಾತಾಡ್ಬೇಕು. ಆಮೇಲೆ ಮಾತ್ರ ನನ್ನ ನಿರ್ಧಾರ ಹೇಳ್ಬಹುದು' ಅಂತ ಹೇಳಿದ.

ತಾಯಿಗೆ ಫೋನ್ ಮಾಡಿ ಎಲ್ಲ ವಿಷಯ ತಿಳಿಸಿದ. ಅವರು, 'ಶ್ರೀಪತಿ ರಾಯರು ಎಲ್ಲಿ? ನಾವು ಎಲ್ಲಿ? ಅವರ ಅಂತಸ್ತು ಏನು? ನಾವು ಬಡತನದ ಹಿನ್ನೆಲೆಯಿಂದ ಬಂದವರು. ಅವರೆಲ್ಲ ಆ ಕಾಲದಲ್ಲೇ ಭಾರೀ ಶ್ರೀಮಂತರು. ಈಗಂತೂ ಕೇಳುದೇ ಬೇಡ. ಮಾತ್ರ